

ಬೆಳಗ್ಗೆಯಿಂದ ಮೋಡ ಕವಿಯುತ್ತ ಮತ್ತೆ ತೆರೆವಾಗುತ್ತ ಕಣ್ಣುಮುಚ್ಚಾಲೆಯಾಡುತ್ತಿತ್ತು. ಸೂರ್ಯ ಆಗೊಮ್ಮೆ ಈಗೊಮ್ಮೆ ಮುಖತೋರಿಸಿ ಮರೆಯಾಗುತ್ತಿದ್ದ. ಮನೆ ಒಳಗೆಲ್ಲ ಹುಮ್ಮಸ್ಸು ತುಂಬಿಕೊಂಡು ಜನ ಮಳೆಯಾಗಬಹುದೆಂದು ಎಲ್ಲೋ ಇಟ್ಟಿದ್ದ ಕೊಡೆಗಳನ್ನು ಮಳೆಯಾದರೆ ಕೆಲಸಕ್ಕೆ ಬರುತ್ತದೆ ಎಂದು ಹುಡುಕಿ ತೆಗೆದರು. ಇನ್ನೇನು ಇಂದಿಲ್ಲದಿದ್ದರೆ ನಾಳೆ ಮಳೆಯಾಗೇ ಆಗುತ್ತದೆಂಬ ಭರವಸೆಯಿಂದ ಮೋಡ ಮುಸುಕಿದ ಮಬ್ಬು ಸೆಕೆ ಹಗಲನ್ನು ಸಹಿಸಿಕೊಂಡಿದ್ದರು. ಸಂಜೆಯಾಗುತ್ತಲೂ ಇದ್ದಕ್ಕಿದ್ದಂತೆ ಗಾಳಿ ಭರ್ರೋ ಎಂದು ಬೀಸತೊಡಗಿ ಟೆರೆಸಿನ ಕಬ್ಬಿಣದ ಬಾಗಿಲು, ಮನೆ ಕಿಟಕಿ ಬಾಗಿಲು ಪಟಪಟನೆ ಹೊಡೆದುಕೊಳ್ಳತೊಡಗಿದವು. ಹೊರಗಿನ ಒಣ ತರಗಲೆಗಳೆಲ್ಲ ಮನೆ ಅಂಗಳದಲ್ಲಿ ಚೆಲ್ಲಾಪಿಲ್ಲಿಯಾಗಿ ಗಾಳಿಯೊಂದಿಗೆ ದೂಳೂ ಮನೆಯೊಳಗನ್ನು ಸೇರುತ್ತದೆಂದು ಎಲ್ಲರ ಮನೆಯ ಬಾಗಿಲು ಕಿಟಕಿಗಳು ರಪ್ಪ ರಪ್ಪನೆ ಮುಚ್ಚಿಕೊಳ್ಳತೊಡಗಿದವು.

ಟೆರೆಸಿನಲ್ಲಿ ಒಣಹಾಕಿದ್ದ ಬಟ್ಟೆಗಳ ನೆನಪಾಗಿ ಸೀತಾ ದುಡುದುಡನೇ ಮಾಳಿಗೆ ಹತ್ತಿ ಬಟ್ಟೆಯನ್ನೆಲ್ಲ ಎಳೆದುಕೊಂಡು 'ಹಾಳು ಗಾಳಿಯಪ್ಪಾ' ಅನ್ನುತ್ತ ಸ್ವಲ್ಪ ಹೊತ್ತು ಬಿಟ್ಟು ಕಾಯಿಪಲ್ಲೆ ತರಲು ಮಾರ್ಕೆಟ್ಟಿಗೆ ಹೋಗಬೇಕಲ್ಲ! ಹೇಗೆ ಹೋಗಲಿ? ಎಂದು ಮತ್ತೆ ಬಾಲ್ಕನಿಯಲ್ಲಿ ನಿಂತು ಆಗಸವನ್ನೆ ನಿಟ್ಟಿಸತೊಡಗಿದ್ದಳು. ನಿನ್ನೆಯ ಘಟನೆ ನೆನಪಾಗಿ ಮತ್ತೆ ಕಣ್ಣು ಹನಿಗೂಡತೊಡಗಿದವು. ಕೆಲವೊಮ್ಮೆ ಮನುಷ್ಯ ಎಂಥ ಹೃದಯಹೀನನಾಗುತ್ತಾನೆ ಎನಿಸಿ ಈ ಗಂಡ ಹೆಂಡತಿ ಸಂಬಂಧ ಏಳೇಳು ಜನುಮದ್ದು ಎನ್ನುವುದೆಲ್ಲ ಸುಳ್ಳುಸುಳ್ಳೆ ಎನಿಸತೊಡಗಿತು. ಸೀತೆ ತನ್ನ ಬದುಕಿನ ಬಗ್ಗೆ ಯೋಚಿಸಿದಾಗೆಲ್ಲ ಅನಿಸುವುದು ಎಲ್ಲ ಸ್ವಾರ್ಥದ ಬದುಕು. ಪ್ರೀತಿ ಎದೆಯಾಳದಿಂದ ಬರುವಂಥ ನವಿರಾದ ಭಾವನೆಯೇ ಹೊರತು ಆವಾಹನೆಮಾಡಿಕೊಳ್ಳುವಂಥದ್ದಲ್ಲವಲ್ಲ! ನಡೆದಷ್ಟುದಾರಿ, ಪಡೆದಷ್ಟು ಋಣ. ತನ್ನ ಯಾವುದೋ ಪೂರ್ವಜನ್ಮದ ಕೆಟ್ಟ ಕರ್ಮವನ್ನು ಈ ಜನ್ಮದಲ್ಲಿ ಭೋಗಿಸುತ್ತಿದ್ದೇನೆಂದುಕೊಳ್ಳುತ್ತಿದ್ದಳು. ಗಂಡ ಕೇಳಿದಾಗೆಲ್ಲ ಹೆಂಡತಿ ಮೈ ಹಾಸಿಕೊಳ್ಳುತ್ತ, ಅವನು ಬಯಸಿದಂತೆ ಕಿಲಿಕಿಲಿ ನಗುತ್ತ ಯಾವ ವಿಚಾರವನ್ನೂ ಮಾಡದ,